**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 71(784) |
| **ಸದಸ್ಯರ ಹೆಸರು** | : | ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 18-08-2025 |
| **ಉತ್ತರಿಸುವವರು** | : | ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವನ್ಯ ಜೀವಿಗಳ ಸಂತತಿ ಹೆಚ್ಚಾಗುತ್ತಿರುವುದು ಸಂತಸದ ಸಂಗತಿಯಾಗಿದ್ದು, ಈ ವನ್ಯಜೀವಿಗಳ ಗಣತಿ ಕಾರ್ಯದ ವಿವರಗಳೇನು: ವನ್ಯಜೀವಿಗಳ ಸಂಖ್ಯೆ ಹೆಚ್ಚಾದಂತೆ ಅವುಗಳ ಓಡಾಟ ಮತ್ತು ಆಹಾರದ ಪ್ರಕ್ರಿಯೆ ಮೇಲಾಗುವ ಪರಿಣಾಮದ ಅಧ್ಯಯನ ನಡೆದಿದೆಯೇ: (ಸಂಪೂರ್ಣ ಮಾಹಿತಿ ನೀಡುವುದು) | ವನ್ಯಜೀವಿಗಳ ಗಣತಿ ಕಾರ್ಯದ ವಿವರಗಳು ಈ ಕೆಳಕಂಡಂತಿದೆ.<br>1. 2022ರಲ್ಲಿ ಅಖಿಲ ಭಾರತ ಹುಲಿ ಗಣತಿ ಕಾರ್ಯ ಕೈಗೊಳ್ಳಲಾಗಿರುತ್ತದೆ. ಸದರಿ ಗಣತಿ ಕಾರ್ಯದ ವರದಿಯನ್ವಯ ಕರ್ನಾಟಕ ರಾಜ್ಯದಲ್ಲಿ ಅಂದಾಜು 563 ಹುಲಿಗಳು ಹಾಗೂ 1879 ಚಿರತೆಗಳು ಇರುತ್ತವೆ.<br>2. 2023ರಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಆಂಧ್ರಪ್ರದೇಶ ಏಕಕಾಲದಲ್ಲಿ ಆನೆ ಗಣತಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಗಣತಿ ಕಾರ್ಯದ ವರದಿಯನ್ವಯ ಕರ್ನಾಟಕ ರಾಜ್ಯದಲ್ಲಿ ಅಂದಾಜು 6395 ಆನೆಗಳು ಇರುತ್ತವೆ.<br>3. ಕರ್ನಾಟಕ ರಾಜ್ಯದ 05 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿ ಹಾಗೂ ಇತರೆ ಸಸ್ಯಹಾರಿ ಪ್ರಾಣಿಗಳ ಗಣತಿ ನಡೆಸಿ 2024ರಲ್ಲಿ ಬಿಡುಗಡೆ ಮಾಡಲಾದ ವರದಿಯಲ್ಲಿ ಸಸ್ಯಹಾರಿ ಪ್ರಭೇದಗಳ ಅಂದಾಜು ಸಂಖ್ಯೆ ವಿವರ ಈ ಕೆಳಕಂಡತಿದೆ;<br>1. ಜಿಂಕೆ: 1,02,968<br>2. ಕಡವೆ: 18,145<br>3. ಕಾಟಿ: 10,577<br>4. ಕಾಡು ಹಂದಿ: 20,982<br>5. ಕಾಡು ಕುರಿ: 10,302<br>ವನ್ಯಜೀವಿಗಳ ಓಡಾಟ ಮತ್ತು ಆಹಾರದ ಪ್ರಕ್ರಿಯೆ ಮೇಲಾಗುವ ಪರಿಣಾಮಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಯಾವುದೇ ಅಧ್ಯಯನ ಕಾರ್ಯ ಕೈಗೊಂಡಿರುವುದಿಲ್ಲ. |
| ಆ) | ಮುಂದಿನ ಮೂವತ್ತು ವರ್ಷದಿಂದ 50 ವರ್ಷಗಳಿಗೆ ಯೋಚಿಸಿ, ಶಾಶ್ವತ ಯೋಜನೆಗಳನ್ನು ರೂಪಿಸಲು ಚರ್ಚಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ: ವನ್ಯ ಜೀವಿಗಳ ಸಂಖ್ಯೆಯು ಹೆಚ್ಚಳವಾಗಿ ಮಾನವರ ಸಂಖ್ಯೆಯು ಹೆಚ್ಚಳವಾಗಿರುವುದರಿಂದ ಉಂಟಾದ ಪರಿಣಾಮಗಳನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಯಾವ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ | **ಆನೆ:**<br>ಆನೆಗಳ ಸಂಖ್ಯೆ ಮೌಲ್ಯಮಾಪನ, ಅವುಗಳ ನಡವಳಿಕೆ, ಮಾನವ-ಆನೆ ಸಂಘರ್ಷ ಪ್ರದೇಶ ನಕ್ಷೆ ಮತ್ತು ಆನೆ ಸಂರಕ್ಷಣಾ ಪ್ರಯತ್ನಗಳನ್ನು ಹೆಚ್ಚಿಸಲು ಮತ್ತು ಸಂಘರ್ಷವನ್ನು ಕಡಿಮೆ ಮಾಡಲು ದೀರ್ಘಾವಧಿಯ ನಿರ್ವಹಣಾ ಯೋಜನೆಗಾಗಿ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ಇವರಿಗೆ ಮೈಸೂರು ಆನೆ ಸಂರಕ್ಷಿತ |

Bhandl

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td></td>
<td>ಸಂಘರ್ಷ ಕಡಿಮೆ ಮಾಡುವಲ್ಲಿ ಸಹಕಾರಿಯಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು)</td>
<td>
ಪ್ರದೇಶದಲ್ಲಿ ಭೂಪ್ರದೇಶ ಮಟ್ಟದ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚಿಸಲಾಗಿದೆ.
ಮಾನವ-ಆನೆ ಸಂಘರ್ಷ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
ಭೌತಿಕ ಅಡೆತಡೆಗಳ ನಿರ್ಮಾಣ:
<ul>
<li>ಕಾಡಾನೆಗಳು/ ವನ್ಯಪ್ರಾಣಿಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿಬೇಲಿ ನಿರ್ಮಾಣ/ ನಿರ್ವಹಣೆ, ಆನೆ ತಡೆ ಕಂದಕ ನಿರ್ಮಾಣ / ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.</li>
<li>ರಾಜ್ಯದಲ್ಲಿ ಮಾನವ-ಆನೆಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು 428.00 ಕಿ.ಮೀ. ರೈಲ್ವೆಬ್ಯಾರಿಕೇಡ್ ನಿರ್ಮಿಸಲಾಗಿದೆ.</li>
</ul>
ಆನೆ ಕಾರ್ಯಪಡೆಗಳ ಸ್ಥಾಪನೆ: ಕಾಡಾನೆ ಹಾವಳಿಯನ್ನು ತಡೆಗಟ್ಟಲು ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ 08 ಆನೆ ಕಾರ್ಯ ಪಡೆ (Elephant Task Force) ಯನ್ನು ರಚಿಸಲಾಗಿರುತ್ತದೆ.
<table>
<tr><th>ಕ್ರ ಸಂ.</th><th>ಸರ್ಕಾರ ಆದೇಶ ಸಂಖ್ಯೆ:</th><th>ದಿನಾಂಕ:</th><th>ಜಿಲ್ಲೆ</th></tr>
<tr><td>1</td><td>ಅಪಜೀ 170 ಎಫ್‌ಡಬ್ಲ್ಯೂಎಲ್ 2022</td><td>21.11.2022</td><td>ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು</td></tr>
<tr><td>2</td><td>ಎಫ್‌ಇಇ 311 ಎಫ್‌ಇಜಿ 2022(ಇ)</td><td>01.02.2023</td><td>ಚಾಮರಾಜನಗರ</td></tr>
<tr><td>3</td><td>ಅಪಜೀ 170 ಎಫ್‌ಡಬ್ಲ್ಯೂಎಲ್ 2022</td><td>30.06.2023</td><td>ರಾಮನಗರ ಹಾಗೂ ಬೆಂಗಳೂರು</td></tr>
<tr><td>4</td><td>ಅಪಜೀ 34 ಎಫ್‌ಡಬ್ಲ್ಯೂಎಲ್ 2024</td><td>18.05.2024</td><td>ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ</td></tr>
</table>
<ul>
<li>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ</li>
</ul>
</td>
</tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಪಶುವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳನ್ನು ಒಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದು ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.<br><br>• ಉಪಟಳ ನೀಡುತ್ತಿರುವ ಮಂಗಗಳನ್ನು ಸೆರೆಹಿಡಿದ ಸೂಕ್ತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಜಲ ಸಂಪನ್ಮೂಲ ಅಭಿವೃದ್ಧಿ:**<br>• ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br><br>**ಆವಾಸಸ್ಥಾನ ಅಭಿವೃದ್ಧಿ:**<br>• ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>**ತ್ವರಿತ ಕಾರ್ಯಾಚರಣೆ:**<br>• ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮ ವಹಿಸಲಾಗುತ್ತಿದೆ. |

JBhat

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | • ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.<br><br>• ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br><br>• ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br><br>• ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯ ನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br><br>• ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್‌ಗಳನ್ನು ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.<br><br>• ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br><br>• ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.<br><br>**ಅರಿವು ಮೂಡಿಸಲು:**<br>• ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.<br><br>**ಪರಿಹಾರ**:<br><br>• ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯು.ಎಲ್ 2022, ದಿನಾಂಕ: |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 29.04.2025 ರಲ್ಲಿ ರೂ. 15.00 ಲಕ್ಷಗಳಿಂದ ರೂ.20.00 ಲಕ್ಷಗಳಿಗೆ ಪರಿಷ್ಕರಿಸಿ ಆದೇಶಿಸಲಾಗಿದೆ.<br><br>• ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡವರಿಗೆ ಆಸ್ತಿಪಾಸ್ತಿ ನಷ್ಟ ಪ್ರಕರಣಗಳಲ್ಲಿ ನೀಡುತ್ತಿರುವ ಪರಿಹಾರ ಧನ ಮತ್ತು ಮಾಸಾಶನ ಧನವನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯು.ಎಲ್ 2022, ಬೆಂಗಳೂರು, ದಿನಾಂಕ: 15-12-2022 ರಲ್ಲಿ ದುಪ್ಪಟ್ಟು ಮಾಡಿ ಪರಿಷ್ಕರಿಸಿ ಆದೇಶಿಸಲಾಗಿದೆ.<br><br>• ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ಬೆಳೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್.ಡಬ್ಲ್ಯು.ಎಲ್. 2016 ದಿನಾಂಕ:19.09.2016 ರಲ್ಲಿ ನಿಗಧಿಪಡಿಸಿರುವ ಪರಿಹಾರ ಮೊತ್ತವನ್ನು ಪ್ರಸ್ತುತ ದಿನಾಂಕ:18.01.2023 ರ ಆದೇಶದಲ್ಲಿ ದುಪ್ಪಟ್ಟು ಮಾಡಿ ಆದೇಶಿಸಲಾಗಿದೆ.<br><br>• ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಎಫ್.ಡಬ್ಲ್ಯು.ಎಲ್. 2022 ದಿನಾಂಕ: 16.02.2023 ರಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಸಾಕು ಪ್ರಾಣಿಗಳ ಪ್ರಾಣ ಹಾನಿ ಪ್ರಕರಣಗಳಿಗೆ ರಾಜ್ಯ ವಿಪತ್ತು ನಿರ್ವಹಣಾ ನಿಧಿ (SDRF) ರಲ್ಲಿನ ಚಾಲ್ತಿಯಲ್ಲಿರುವ ಪರಿಷ್ಕೃತ ದರಗಳಂತೆ ಪಾವತಿಸಲು ಆದೇಶಿಸಲಾಗಿದೆ.<br><br>**ಸಹಾಯಧನ:**<br>• ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರ್ಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>• ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ ಎಲ್‌ಪಿಜಿಗ್ಯಾಸ್, ಸೋಲಾರ್ ದೀಪಗಳನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | • ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ Cattle Shed ನಿರ್ಮಾಣ ಮಾಡಲು ಸಹಾಯ ಮಾಡಲಾಗುತ್ತಿದೆ.<br><br>**ತಂತ್ರಜ್ಞಾನಬಳಕೆ:**<br>• ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾ ವತಿಯಿಂದ **"ಹೆಜ್ಜೆ"**ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br><br>• ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"**ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆ ಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ.<br><br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ / ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br><br>• ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br><br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br><br>• ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಹುಲಿ:**<br>ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿ ಇವರ ಮಾರ್ಗಸೂಚಿಯನ್ವಯ ಹುಲಿಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ರಾಜ್ಯದಲ್ಲಿ ಈ ಕೆಳಕಂಡ 05 ಹುಲಿ ಸಂರಕ್ಷಿತ ಪ್ರದೇಶಗಳನ್ನು ರಚಿಸಲಾಗಿರುತ್ತದೆ.<br>1. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ<br>2. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ<br>3. ಭದ್ರಾ ಹುಲಿ ಸಂರಕ್ಷಿತ ಪ್ರದೇಶ<br>4. ಕಾಳಿ ಹುಲಿ ಸಂರಕ್ಷಿತ ಪ್ರದೇಶ<br>5. ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ<br><br>ಸದರಿ ಹುಲಿ ಸಂರಕ್ಷಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಹುಲಿ ಸಂರಕ್ಷಣಾ ಯೋಜನೆಯನ್ನು ತಯಾರಿಸಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅನುಮೋದನೆ ಪಡೆದು ಹುಲಿಗಳ ಸಂರಕ್ಷಣಾ ಕಾರ್ಯ ಕೈಗೊಳ್ಳಲಾಗಿರುತ್ತದೆ.<br><br>**ಚಿರತೆ, ಕರಡಿ, ಕಾಟಿ ಮತ್ತು ಇತರೆ ವನ್ಯಪ್ರಾಣಿಗಳ** ನಿರ್ವಹಣೆಗಾಗಿ ಪ್ರತಿಯೊಂದು ವನ್ಯಜೀವಿಧಾಮಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ಯೋಜನೆಯನ್ನು ತಯಾರಿಸಿ, ಆವಾಸಸ್ಥಾನ ಅಭಿವೃದ್ಧಿ, ಜಲ ಸಂಪನ್ಮೂಲ ಅಭಿವೃದ್ಧಿ, ಅನಗತ್ಯವಾಗಿ ಬೆಳೆದ ಕಳೆಗಿಡಗಳ ನಿರ್ಮೂಲನೆ ಮಾಡಿ ಹುಲ್ಲುಗಾವಲುಗಳ ಅಭಿವೃದ್ಧಿ ಮತ್ತು ಇತ್ಯಾದಿ ಚಟುವಟಿಕೆಗಳ ಮೂಲಕ ವನ್ಯಪ್ರಾಣಿಗಳ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.<br><br>ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇರದಂತೆ ಸಂಚರಿಸಲು ಅನುಕೂಲವಾಗುವಂತೆ ವನ್ಯಜೀವಿ ಕಾರಿಡಾರ್ (Wildlife Corridor) ಅನುಷ್ಠಾನಗೊಳಿಸಬೇಕಾಗಿರುತ್ತದೆ, ಇದಕ್ಕಾಗಿ ತಯಾರಿಸಿರುವ ವನ್ಯಜೀವಿ ಕಾರಿಡಾರ್ (Wildlife Corridor) ರಾಜ್ಯನೀತಿಯನ್ನು ರಚಿಸಲಾಗಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ.<br><br>ಮುಂದಿನ 30-50 ವರ್ಷದ ದೀರ್ಘಕಾಲದ ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಿಸಲು ವನ್ಯಜೀವಿಧಾಮಗಳಲ್ಲಿ ಆಹಾರ ಮತ್ತು ಜಲಸಂಪನ್ಮೂಲಗಳನ್ನು ಹೆಚ್ಚಿಸಲು ಈ ಕೆಳಕಂಡ ಪ್ರಮುಖ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.<br><br>**ಅ)** ಹೆಚ್ಚಿನ ವನ್ಯಜೀವಿ ವನ್ಯಧಾಮದಲ್ಲಿ 30 ರಿಂದ 60 ರಷ್ಟು ಅಥವಾ ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಅನಗತ್ಯವಾದ ಕಳೆಗಿಡಗಳಾದ ಲಾಂಟನಾ, ಸೆನ್ನಾ, ಸ್ಪೆಕ್ಟ್ಯಾಬಿಲಿಸ್, |

Rchal

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಯುಪಟೋರಿಯಮ್, ಮೈಕಾನಿಯಾ ಮೈಕ್ರಾಂತ ಇತ್ಯಾದಿಗಳನ್ನು ಹಂತ-ಹಂತವಾಗಿ ನಿರ್ಮೂಲನೆ ಮಾಡಿ ಹುಲ್ಲುಗಾವಲುಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ.<br><br>**ಆ)** ಎಲ್ಲಾ ವನ್ಯಜೀವಿ ವನ್ಯಧಾಮಗಳಲ್ಲಿ ನೀರಿನ ಸೌಲಭ್ಯ ಹೆಚ್ಚಿಸಲು ಕೆರೆಗಳ ನಿರ್ಮಾಣ/ ಹೂಳೆತ್ತುವುದು/ ನಾಲಾಬಂಧ್/ ಚೆಕ್‌ಡ್ಯಾಮ್ ಇತರೆ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳಲಾಗುತ್ತಿದೆ.<br><br>**ಇ)** ವನ್ಯಜೀವಿಧಾಮದ ಒಳಗಿರುವ Enclosuresಗಳಲ್ಲಿ ವಾಸಿಸುತ್ತಿರುವ ಜನರಿಗೆ ಸಾಮಾಜಿಕ, ಆರ್ಥಿಕ ಭದ್ರತೆ ಅಭಿವೃದ್ಧಿಗಾಗಿ ಅವರನ್ನು ವನ್ಯಜೀವಿಧಾಮಗಳಿಂದ ಹೊರತಂದು ಪುನರ್ವಸತಿ ಯೋಜನೆಯನ್ನು ಕಲ್ಪಿಸಲಾಗುತ್ತಿದೆ.<br><br>ಮೇಲೆ ವಿವರಿಸಿದ ಕಾರ್ಯಕ್ರಮಗಳಲ್ಲದೇ, ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಕಾಲಕಾಲಕ್ಕೆ ಇತರೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮಾನವ- ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡಬಹುದಾಗಿರುತ್ತದೆ. |
| ಇ) | ಮಾನವ ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರಿಗೆ ಸರ್ಕಾರ ನೀಡುವ ಪರಿಹಾರದ ಮೊತ್ತವೆಷ್ಟು: ಈ ವರ್ಷದಲ್ಲಿ ವಿತರಿಸಿರುವ ಪರಿಹಾರದ ಮೊತ್ತ ಮತ್ತು ವ್ಯಕ್ತಿಗಳ ಸಂಪೂರ್ಣ ವಿವರ ನೀಡಿ: ಇತ್ತೀಚೆಗೆ ಐದು ಹುಲಿಗಳ ಸಾವಿನ ನಂತರ ಈ ರೀತಿಯ ಘಟನೆಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ದೀರ್ಘಕಾಲಿನ ಯೋಜನೆಗಳು ಯಾವುವು; ಮತ್ತು ಹುಲಿ ಸಂರಕ್ಷಣಾ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಸಮಗ್ರ ಕಾರ್ಯಕ್ರಮಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಮಾನವ ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರಿಗೆ ಸರ್ಕಾರ ನೀಡುವ ಪರಿಹಾರದ ವಿವರ ಈ ಕೆಳಕಂಡಂತಿದೆ;<br><br>• ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಅಪಜೀ.114. ಎಫ್.ಡಬ್ಲ್ಯೂ.ಎಲ್.2022, ದಿನಾಂಕ: 29.04.2025 ರನ್ವಯ ರೂ.20.00 ಲಕ್ಷಗಳ ಪರಿಹಾರಧನ ಪಾವತಿಸಲಾಗುತ್ತಿದೆ. ಅದಲ್ಲದೇ ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯೂ.ಎಲ್ 2022, ಬೆಂಗಳೂರು, ದಿನಾಂಕ:15-12-2022 ರನ್ವಯ ಮೃತ ಕುಟುಂಬದ ವಾರುಸುದಾರರಿಗೆ ಮಾಸಿಕ ರೂ.4,000 ದಂತೆ 05 ವರ್ಷಗಳ ಅವಧಿಗೆ ಮಾಸಾಶನವನ್ನು ಪಾವತಿಸಲಾಗುತ್ತಿದೆ.<br><br>2025-26ನೇ ಸಾಲಿಗೆ ಮಾನವ -ವನ್ಯಜೀವಿ ಸಂಘರ್ಷದಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಪಾವತಿಸಲಾದ ಪರಿಹಾರದ ಮೊತ್ತದ ವಿವರಗಳನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ.<br><br>ಹುಲಿ ಅಸಹಜ ಸಾವನ್ನು ತಡೆಗಟ್ಟಲು ಹಾಗೂ ಹುಲಿ ಸಂರಕ್ಷಣಾ ಯೋಜನೆಯ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಅನುಷ್ಠಾನಕ್ಕಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>1. ವನ್ಯಜೀವಿ ವನ್ಯಧಾಮದ ಅನುಮೋದಿತ ನಿರ್ವಹಣಾ ಯೋಜನೆಯ ಪ್ರಕಾರ ಜಲಸಂಪನ್ಮೂಲ ಅಭಿವೃದ್ಧಿ ಕಾಮಗಾರಿಗಳು, ಅನಗತ್ಯವಾಗಿ ಬೆಳೆದ ಕಳೆಗಿಡಗಳನ್ನು ನಿರ್ಮೂಲನೆ ಮಾಡಿ ಹುಲ್ಲುಗಾವಲು ಪುನಶ್ಚೇತನ ಕಾಮಗಾರಿ ಕೈಗೊಳ್ಳುವುದು. ವನ್ಯಜೀವಿ ಧಾಮಗಳ ಅಂಚಿನಲ್ಲಿರುವ ಗ್ರಾಮಗಳಲ್ಲಿ ಹೆಚ್ಚು ಹಾಲು ಉತ್ಪಾದಿಸುವ ಉತ್ತಮ ತಳಿಯ ಜಾನುವಾರುಗಳನ್ನು ನೀಡಿ ಅವುಗಳ ಒಟ್ಟಾರೆ ಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಅರಣ್ಯದ ಒಳಗೆ ಹಾಗೂ ಅರಣ್ಯದಂಚಿನಲ್ಲಿ ಮೇವಿನ ಅವಲಂಬನೆಯನ್ನು ಕಡಿಮೆ ಮಾಡಲು ಕ್ರಮಕೈಗೊಳ್ಳಬೇಕಾಗಿದೆ.<br>2. ಇಲಾಖಾ ಸಿಬ್ಬಂದಿಗಳು ನಿರಂತರ ಗಸ್ತು ಸಂಚರಿಸಿ Mstripes ತಂತ್ರಾಂಶದ ಮೂಲಕ ಗಸ್ತಿನ ವಿವರಗಳನ್ನು ದಾಖಲಿಸಿ, ಅರಣ್ಯದಲ್ಲಿ ಹಾಗೂ ಅರಣ್ಯದಂಚಿನ ಪ್ರದೇಶಗಳಲ್ಲಿ ಉರುಳು ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ, ಸೌರ ಬೇಲಿಗಳಿ ಅಕ್ರಮ ವಿದ್ಯುತ್ ಸಂಪರ್ಕ ಒದಗಿಸಿರುವುದನ್ನು ತಡೆಗಟ್ಟುವ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ.<br>3. ಕಳ್ಳಬೇಟೆ ತಡೆ ಶಿಬಿರಗಳನ್ನು ಸ್ಥಾಪಿಸಿ ವನ್ಯಜೀವಿಗಳ ಬೇಟೆಯಾಡುವುದನ್ನು ತಡೆಗಟ್ಟಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>4. ವನ್ಯಜೀವಿಧಾಮಕ್ಕೆ ಮಂಜೂರಾದ ಮುಂಚೂಣಿ ಸಿಬ್ಬಂದಿ ಹುದ್ದೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಕಾಲಮಿತಿಯೊಳಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಅಪಜೀ 185 ಎಫ್‌ಡಬ್ಲ್ಯೂಎಲ್ 2025

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

## ಪ್ರಶ್ನೆ ಸಂಖ್ಯೆ-71 (784) ರ ಅನುಬಂಧ-1

| ಕ್ರ.ಸಂ | ವಿಭಾಗ | ಜಿಲ್ಲೆ | ಸ್ಥಳ | ದಿನಾಂಕ | ಹೆಸರು | ವನ್ಯಪ್ರಾಣಿ | ಪರಿಹಾರ ಮೊತ್ತ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ವಿರಾಜಪೇಟೆ | ಕೊಡಗು | ಮೇಕೂರು ಹೊಸಕೆರೆ ಗ್ರಾಮ, ತಿತಿಮತಿ ವಲಯ | 24.04.2025 | ಸೆಲ್ವಂ | ಕಾಡಾನೆ | 20.00 | - |
| 2 | ಮಡಿಕೇರಿ | ಕೊಡಗು | ಕುಶಾಲನಗರ ವಲಯ | 25.04.2025 | ಎಸ್.ಆರ್ ಚಿಣ್ಣಪ್ಪ | ಕಾಡಾನೆ | 20.00 | - |
| 3 | ಹಾಸನ | ಹಾಸನ | ಸಕಲೇಶಪುರ ತಾಲ್ಲೂಕು, ಬೆಳಗೋಡು ಹೋಬಳಿ, ಬೈಕೆರೆ ಗ್ರಾಮದ ವಾಸಿ | 25.04.2025 | ಷಣ್ಮುಖ ಬಿನ್ ಅಮೃತೇಶ್, | ಕಾಡಾನೆ | 20.00 | - |
| 4 | ಮಂಗಳೂರು | ದಕ್ಷಿಣ ಕನ್ನಡ | ಅರ್ತಿಯಡ್ಕ, ಕೊಳ್ಳಿಗೆ ಗ್ರಾಮ, ಪುತ್ತೂರು ವಲಯ | 29.04.2025 | ಸಲ್ಲಮ್ಮ ಕೋಂ ತಿಲಕ್, | ಕಾಡಾನೆ | 20.00 | - |
| 5 | ಮಲೈಮಹದೇಶ್ವರ | ಚಾಮರಾಜನಗರ | ಹುತ್ತೂರು ಶಾಖೆ, ಹುತ್ತೂರು ಗಸ್ತಿನ ಕೊಮ್ಮರನಕತ್ರಿ ಗ್ರಾಮ, ಲೊಕ್ಕನಹಳ್ಳಿ ಹೋಬಳಿ, ಹನೂರು ತಾಲ್ಲೂಕು, P.G Palya WL Range | 30.04.2025 | ನಂಜಪ್ಪ | ಕಾಡಾನೆ | 20.00 | - |
| 6 | ಹಾಸನ | ಹಾಸನ | ಕೋಡಿಹಳ್ಳಿ ಗ್ರಾಮ, ಯಸಲೂರು ವಲಯ | 05.05.2025 | ತಿಮ್ಮಪ್ಪಗೌಡ | ಕಾಡುಕೋಣ | 20.00 | - |
| 7 | ನಾಗರಹೊಳೆ | ಮೈಸೂರು | ಬಳ್ಳೆ ಹಾಡಿ, ಡಿ.ಬಿ ಕುಪ್ಪೆ ವಲಯ, ಹೆಚ್.ಡಿ ಕೋಟೆ | 20.05.2025 | ಸೀತೆ | ಕಾಡಾನೆ | - | ಅರಣ್ಯದೊಳಗೆ ಮೃತರಾಗಿರುತ್ತಾರೆ |
| 8 | ವಿರಾಜಪೇಟೆ | ಕೊಡಗು | ಹೆಬ್ಬಾಲೆ ಗ್ರಾಮದ ಅಯ್ಯಪ್ಪ ಭದ್ರಕಾಳಿ ದೇವರಪುರ ಕಡಂಗ ರಸ್ತೆಯಲ್ಲಿ, ದೇವಮಚ್ಚಿ ಶಾಖೆ, ತಿತಿಮತಿ ವಲಯ | 21.05.2025 | ಅಣ್ಣಯ್ಯ | ಕಾಡಾನೆ | 20.00 | - |
| 9 | ಹಾಸನ | ಹಾಸನ | ಅಂಕಿಹಳ್ಳಿ, ಬೇಲೂರು ವಲಯ | 23.05.2025 | ಚಂದ್ರಕಲಾ | ಕಾಡಾನೆ | 20.00 | - |
| 10 | ಹುಣಸೂರು | ಮೈಸೂರು | ಹನಗೋಡು ಹೋಬಳಿ ಸೊಳ್ಳೆಪುರ ಹುಣಸೂರು ವಲಯ | 26.05.2025 | ಹರೀಶ್ | ಚಿರತೆ | 20.00 | - |
| 11 | ವಿರಾಜಪೇಟೆ | ಕೊಡಗು | ಕುಕ್ಕುನೂರು- ಕರಡಿಗುಡ್ಡ, ವಿರಾಜಪೇಟೆ ವಲಯ | 06.06.2025 | ಪುರುಷೋತ್ತಮ | ಆನೆ | 20.00 | - |
| 12 | ಬಿ.ಆರ್.ಟಿ ಹು.ಸಂ. | ಚಾಮರಾಜನಗರ | ಬೇಡಗುಳಿ ಗ್ರಾಮ, ಪುಣಜೂರು ವಲಯ | 10.06.2025 | ರಂಗಮ್ಮ ಕೋಂ ಚಂಗುಚನ್ನಂಜ | ಹುಲಿ | 5.00 | ಮರಣೋತ್ತರ ಪರೀಕ್ಷಾ ವರದಿ ಬಾಕಿ ಇರುತ್ತದೆ |
| 13 | ಭದ್ರಾವತಿ | ಶಿವಮೊಗ್ಗ | ಬಂಡಿಗುಡ್ಡ ಗ್ರಾಮ, ಚನ್ನಗಿರಿ ವಲಯ | 19.06.2025 | ಕುಮಾರ ಬಿ | ಆನೆ | 20.00 | - |
| 14 | ಕೊಪ್ಪ | ಚಿಕ್ಕಮಗಳೂರು | ಹಲಗಡಕ ಗ್ರಾಮ, ಬಾಳೂರು ಹೋಬಳಿ, ಮೂಡಗೆರೆ ತಾ\|\|, ಕೊಪ್ಪ/ಕಳಸ ವಲಯ | 06.07.2025 | ರಮೇಶ್ ಬಿನ್ ವೆಂಕಟಪ್ಪ | ಕಾಡುಕೋಣ | 20.00 | - |
| 15 | ಬಿ.ಆರ್.ಟಿ ಹು.ಸಂ. | ಚಾಮರಾಜನಗರ | ಬಿಳಿಗಿರಿ ರಂಗನಬೆಟ್ಟದ ಸೀಗೆಬೆಟ್ಟಪೋಡಿನ ನಿವಾಸಿ, ಯಳಂದೂರು ವಲಯ | 14.07.2025 | ಸಿದ್ದೇಗೌಡ | ಕರಡಿ | 5.00 | ಮರಣೋತ್ತರ ಪರೀಕ್ಷಾ ವರದಿ ಬಾಕಿ ಇರುತ್ತದೆ |
| 16 | ಮಂಗಳೂರು | ದಕ್ಷಿಣ ಕನ್ನಡ | ಕೊಕ್ಕಡ ಗ್ರಾಮ, ಉಪ್ಪಿನಂಗಡಿ ವಲಯ, | 17.07.2025 | ಶ್ರೀ ಬಾಲಕೃಷ್ಣ ಶೆಟ್ಟಿ | ಆನೆ | - | ಮರಣೋತ್ತರ ಪರೀಕ್ಷಾ ವರದಿ ಬಾಕಿ ಇರುತ್ತದೆ |
| 17 | ಕೊಪ್ಪ | ಚಿಕ್ಕಮಗಳೂರು | ಬನ್ನೂರು ಗ್ರಾಮದ ಸ.ನಂ.14ರಲ್ಲಿ, ನರಸಿಂಹರಾಜಪುರ ತಾಲ್ಲೂಕು, ಬಾಳೆಹೊನ್ನೂರು ಹೋಬಳಿ/ವಲಯ | 23.07.2025 | ಶ್ರೀಮತಿ ಅನಿತಾ ಎಂ ಕೋಂ ಹಾಲೇಶ್ ಹೆಚ್.ಬಿ, | ಆನೆ | 20.00 | - |

| ಕ್ರ.ಸಂ | ವಿಭಾಗ | ಜಿಲ್ಲೆ | ಸ್ಥಳ | ದಿನಾಂಕ | ಹೆಸರು | ವನ್ಯಪ್ರಾಣಿ | ಪರಿಹಾರ ಮೊತ್ತ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 18 | ಮಲೈಮಹದೇಶ್ವರ | ಚಾಮರಾಜನಗರ | ಮಲೈ ಮಹದೇಶ್ವರಬೆಟ್ಟ ವನ್ಯಜೀವಿ ವಲಯದ ಪೊನ್ನಾಚಿ ಶಾಖೆಯ ಚಂಗಡಿ ಗಸ್ತಿನ ಸಿಪಿಟಿ 49 ರ ಜಬ್ಬರ್ ಕೋರೆಯ ಹತ್ತಿರದ ಸರ್ವೆ ನಂಬರ್ 04 ರ ಮುನಿ ವೆಂಕಟೇಗೌಡರವರ ಜಮೀನು | 26.07.2025 | ಅಂಬೇಕರ್ ಹರಿಪ್ರಸಾದ್ | ಆನೆ | - | ವಾರಸುದಾರರ ಇತ್ಯರ್ತ ಬಾಕಿ ಇರುತ್ತದೆ |
| 19 | ಕೊಪ್ಪ | ಚಿಕ್ಕಮಗಳೂರು | ಅಂಡವಾನೆ ಗ್ರಾಮ | 27.07.2025 | ಸುಬ್ರಾಯ್ ಗೌಡ | ಆನೆ | 20.00 | - |
| 20 | ಮಡಿಕೇರಿ | ಕೊಡಗು | ದಬ್ಬಡ್ಕ ಗ್ರಾಮ, ಚೆಂಬು ಗ್ರಾಮಪಂಚಾಯಿತಿ, ಸಂಬಾಜೆ ವಲಯ | 06.08.2025 | ಕೊಪ್ಪದ ಶಿವಪ್ಪ | ಆನೆ | 5.00 | ಮರಣೋತ್ತರ ಪರೀಕ್ಷಾ ವರದಿ ಬಾಕಿ ಇರುತ್ತದೆ |
| 21 | ರಾಮನಗರ | ಬೆಂಗಳೂರು ದಕ್ಷಿಣ | ಕನಕಪುರ | 12.08.2025 | ಶ್ರೇಯಸ್ | ಆನೆ | - | ನಿಯಮಾನುಸಾರ ಪಾವತಿಸಲಾಗುವುದು |
| Total | | | | | | | 295.00 | |

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**